# ಕ್ಷೇತ್ರಶಿಕ್ಷಣಾಧಿಕಾರಿಗಳಕಾರ್ಯಾಲಯ, ನಂಜನಗೂಡು

## ಕಲಿಕಾಸಂಗಮ

ಕನ್ನಡ ಅಭ್ಯಾಸ ಪತ್ರಿಕೆಗಳು (ಸೇತುಬಂಧಮಾದರಿ)

## 8 ನೇ ತರಗತಿ




## ಕಲಿಕಾ ಮಿತ್ರ ಕನ್ನಡ

# ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಸಾ. ಶಿ. ಇಲಾಖೆ ನಂಜನಗೂಡು

## ಸೇತುಬಂಧ 20221-22

## 8ನೆಯ ತರಗತಿ ಕನ್ನಡ ಅಭ್ಯಾಸ ಹಾಳೆ – 1

**ಇಲ್ಲಿ ನೀಡಿರುವ ಚಟುವಟಿಕೆಗಳನ್ನು ನೋಟ್ ಪುಸ್ತಕದಲ್ಲಿ**

***ಕೊಟ್ಟಿರುವ ಗುಣಿತಾಕ್ಷರ ಮತ್ತು ಪದಗಳನ್ನು ಓದಿ ನಂತರ ತಪ್ಪಿಲ್ಲದಂತೆ ನಿಮ್ಮ ಪುಸ್ತಕದಲ್ಲಿ ನಕಲು ಮಾಡಿ:-***

| ಕ | | ಗ | | ದ | |
|---|---|---|---|---|---|
| ಕ | ಕಲಿಕೆ | ಗ | ಗಳಿಕೆ | ದ | ದವಸ |
| ಕಾ | ಕಾರಣ | ಗಾ | ಗಾಯನ | ದಾ | ದಾರಿದೀಪ |
| ಕಿ | ಕಿರೀಟ | ಗಿ | ಗಿರೀಶ | ದಿ | ದಿವಸ |
| ಕೀ | ಕೀಟ | ಗೀ | ಗೀಜುಗ | ದೀ | ದೀನಬಂಧು |
| ಕು | ಕುಹಕ | ಗು | ಗುರುತರ | ದು | ದುಡಿಮೆ |
| ಕೂ | ಕೂಟ | ಗೂ | ಗೂಡು | ದೂ | ದೂಷಿತ |
| ಕೃ | ಕೃಪಣ | ಗೃ | ಗೃಹ | ದೃ | ದೃಷ್ಟಿ |
| ಕೆ | ಕೆಸರು | ಗೆ | ಗೆಲ್ಲು | ದೆ | ದೆಸೆ |
| ಕೇ | ಕೇಶವ | ಗೇ | ಗೇಯತೆ | ದೇ | ದೇವತೇಜ |
| ಕೈ | ಕೈವಶ | ಗೈ | ಗೈರುಹಾಜರಿ | ದೈ | ದೈವಕೃಪೆ |
| ಕೊ | ಕೊನೆ | ಗೊ | ಗೊರಸು | ದೊ | ದೊರೆತನ |
| ಕೋ | ಕೋಸಲ | ಗೋ | ಗೋಕರ್ಣ | ದೋ | ದೋಷಾರೋಪ |
| ಕೌ | ಕೌಶಿಕ | ಗೌ | ಗೌರವ | ದೌ | ದೌಡಾಯಿಸು |
| ಕಂ | ಕಂದರ | ಗಂ | ಗಂಧರ್ವ | ದಂ | ದಂತ |
| ಕಃ | | ಗಃ | | ದಃ | |

**ಇದೇ ರೀತಿ ಇನ್ನಷ್ಟು ಪದಗಳನ್ನು ಬರೆಯಲು ಪ್ರಯತ್ನಿಸಿ**

**ಸಮಾನಾರ್ಥಕ ಪದಗಳ ಪರಿಚಯ**

**ಕೊಟ್ಟಿರುವ ಪದಗಳನ್ನು ಓದಿಕೊಂಡು ನಿಮ್ಮ ಪುಸ್ತಕದಲ್ಲಿ ಬರೆಯಿರಿ ಮತ್ತು ಮಾತನಾಡುವಾಗ ಈ ಪದಗಳನ್ನು ಬಳಸಿ;-**

| | |
|---|---|
| 1. ಕಣ್ಣು, ನಯನ, ನೇತ್ರ, ಅಕ್ಷಿ<br>2. ಸೂರ್ಯ, ನೇಸರ, ಭಾನು, ರವಿ<br>3. ಹಸು, ಆಕಳು, ದನ, ತುರು<br>4. ಆಕಾಶ, ಗಗನ, ಬಾನು, ಮುಗಿಲು | 5. ಸಮುದ್ರ, ಕಡಲು, ಸಾಗರ, ಶರಧಿ<br>6. ಕುದುರೆ, ಹಯ, ಅಶ್ವ, ತುರಗ<br>7. ಆನೆ, ಗಜ, ದಂತಿ, ಕರಿ<br>8. ಹಾವು, ಸರ್ಪ, ಉರಗ, ಫಣಿ |
| **ಮಾದರಿಯಂತೆ ಬರೆಯಿರಿ;-** | |
| 1. ಹಣ + ವಂತ = ಹಣವಂತ<br>2. ಗುಣ + ವಂತ = _________<br>3. ಧೈರ್ಯ + ವಂತ = ________<br>4. ಸಿರಿ + ವಂತ = ___________<br>5. ಬುದ್ಧಿ + ವಂತ = _________ | 1. ಕನಸು + ಗಾರ = ಕನಸುಗಾರ<br>2. ಕೆಲಸ + ಗಾರ = __________<br>3. ಸೊಗಸು + ಗಾರ = _______<br>4. ಮೋಸ + ಗಾರ = __________<br>5. ಮಾತು + ಗಾರ = ____________ |
| **ವಿರುದ್ಧಪದ ಬರೆಯಿರಿ;-** | |
| ಸಹಕಾರ x ಅಸಹಕಾರ<br>ಸಮಾನತೆ x<br>ಪ್ರಕಟಿತ x<br>ನೀತಿ x<br>ಹಿಂಸೆ x | ಗಣಿತ x<br>ಸಾಮಾನ್ಯ x<br>ಘೋಷಿತ x<br>ಬಾಧಿತ x<br>ಕ್ರಮ x |

BEO NANJANGUD

**ಕೊಟ್ಟಿರುವ ಅಕ್ಷರ ಚೌಕದಲ್ಲಿ ಅಡಗಿರುವ ಊರುಗಳ ಹೆಸರುಗಳನ್ನು ಸುಳಿವುಗಳ ಸಹಾಯದಿಂದ ಹುಡುಕಿರಿ.**

| | | | | | | |
|---|---|---|---|---|---|---|
| ಕೊ | ಗೆ | ಬೇ | ರು | ಸೆ | ಗೆ | ದೆ |
| ರು | ದ | ಲೂ | ರು | ಮಂ | ಡ್ಯ | ಮ |
| ಮೈ | ಸೂ | ರು | ಸು | ಗ | ಪು | ರ |
| ಉ | ಮ | ದ | ನು | ಳೂ | ಸು | ತ |
| ಡು | ಬೆಂ | ಗ | ಳೂ | ರು | ಕು | ಲ |
| ಪಿ | ಗಿ | ಸ | ಶಿ | ರ | ನು | ಕಾ |
| ಹ | ಳ್ಳಿ | ನಂ | ಜ | ನ | ಗೂ | ಡು |

**ಸುಳಿವುಗಳು:**

1. ಅರಮನೆ ನಗರಿ
2. ಸಕ್ಕರೆ ನಗರಿ
3. ನಮ್ಮ ತಾಲ್ಲೂಕು
4. ಪಂಚಲಿಂಗ ದರ್ಶನ ನಡೆವ ಊರು
5. ನಮ್ಮ ರಾಜ್ಯದ ರಾಜಧಾನಿ
6. ಬಂದರು ನಗರಿ
7. ಕೃಷ್ಣನು ನೆಲೆಸಿದ ಊರು

***ಹೊಸ ಪದಗಳನ್ನು ರಚಿಸಿ ಆನಂದಿಸಿ.***

| | | | | | |
|---|---|---|---|---|---|
| ಅನು | ಮಾನ | ಅನುಮಾನ | ಕೈ | ಕೆಲಸ | ಕೈಕೆಲಸ |
| | ಚರ | | | ಗೊಂಬೆ | |
| | ನಯ | | | ಮರ | |
| | ಭವ | | | ಕಾಸು | |
| | ರಣನ | | | ಚೀಲ | |
| | ಕರಣೆ | | | ದೀಪ | |
| | ಸರಣೆ | | | ಕಸುಬು | |

**ಕೊಟ್ಟಿರುವ ಪದಗಳನ್ನು ಬಳಸಿ ನಿಮ್ಮದೇ ವಾಕ್ಯ ರಚಿಸಿ;-**

ಊರೂರು – ಕರೋನಾ ಕಾರಣದಿಂದ ಊರೂರು ತಿರುಗಲು ಸಾಧ್ಯವಾಗುತ್ತಿಲ್ಲ.
ಮತ್ತೆಮತ್ತೆ –
ತುತ್ತತುದಿ –
ಆಸಕ್ತಿ –
ಜನಪ್ರಿಯ –
ತಳಿರು ತೋರಣ –

B.E.O NANJANGUD

ಇಲ್ಲಿ ನೀಡಿರುವ ಚಟುವಟಿಕೆಗಳನ್ನು ನೋಟ್ ಪುಸ್ತಕದಲ್ಲಿ ಬರೆಯಿರಿ

## *I. 'ನ', ' ಸ', 'ತ' ಅಕ್ಷರದ ಗುಣಿತಾಕ್ಷರಗಳಿಗೆ ಪದಗಳನ್ನು ಬರೆಯಿರಿ:-*

| ನ | | ಸ | | ತ | |
|---|---|---|---|---|---|
| ನ | | ಸ | | ತ | |
| ನಾ | | ಸಾ | | ತಾ | |
| ನಿ | | ಸಿ | | ತಿ | |
| ನೀ | | ಸೀ | | ತೀ | |
| ನು | | ಸು | | ತು | |
| ನೂ | | ಸೂ | | ತೂ | |
| ನೃ | | ಸೃ | | ತೃ | |
| ನೆ | | ಸೆ | | ತೆ | |
| ನೇ | | ಸೇ | | ತೇ | |
| ನೈ | | ಸೈ | | ತೈ | |
| ನೊ | | ಸೊ | | ತೊ | |
| ನೋ | | ಸೋ | | ತೋ | |
| ನೌ | | ಸೌ | | ತೌ | |
| ನಂ | | ಸಂ | | ತಂ | |
| ನಃ | | ಸಃ | | ತಃ | |

## II. ಕೊಟ್ಟಿರುವ ವಾಕ್ಯ ವೃಂದವನ್ನು ಓದಿಕೊಂಡು ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ;-

ಕನ್ನಡ ನಾಡಿನ ರಸ ಋಷಿ ಎಂದೇ ಹೆಸರಾಗಿರುವ ಕುವೆಂಪು ಅವರ ಪೂರ್ಣ ಹೆಸರು ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ. ಇವರು ಹುಟ್ಟಿದ್ದು ಮಲೆನಾಡಿನ ಮಡಿಲಲ್ಲಿರುವ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಕುಪ್ಪಳಿಯಲ್ಲಿ. ತಂದೆ ವೆಂಕಟಪ್ಪ ತಾಯಿ ಸೀತಮ್ಮ. ಹಚ್ಚ ಹಸುರಿನ ಕಾಡು, ಹರಿಯುವ ನದಿ, ಪಕ್ಷಿ ಪ್ರಾಣಿಗಳ ಒಡನಾಟ ಇವು ನಿಸರ್ಗ ಪ್ರೇಮಿಯಾಗಿದ್ದ ಬಾಲಕ ಪುಟ್ಟಪ್ಪ ಅವರ ಕವಿ ಮನಸ್ಸನ್ನು ಅರಳಿಸಿತು. ಕುವೆಂಪು ಅವರು ಮಕ್ಕಳಿಗಾಗಿ ಮೋಡಣ್ಣನ ತಮ್ಮ, ಬೊಮ್ಮನ ಹಳ್ಳಿಯ ಕಿಂದರಿಜೋಗಿ, ನನ್ನ ಗೋಪಾಲ ಪುಸ್ತಕಗಳನ್ನು ಬರೆದಿದ್ದಾರೆ. ಪ್ರಕೃತಿಯ ಆರಾಧಕರಾದ ಕುವೆಂಪು ಅವರು ಪಕ್ಷಿಕಾಶಿ, ನವಿಲು, ಕೊಳಲು, ಪಾಂಚಜನ್ಯ ಮೊದಲಾದ ಕವನ ಸಂಕಲನಗಳನ್ನು ರಚಿಸಿದ್ದಾರೆ. ಅನೇಕ ಕಾದಂಬರಿಗಳು ನಾಟಕಗಳನ್ನೂ ರಚಿಸಿದ್ದಾರೆ. ಇವರ ರಾಮಾಯಣ ದರ್ಶನಂ ಕೃತಿಗೆ ಭಾರತೀಯ ಜ್ಞಾನಪೀಠ ಪ್ರಶಸ್ತಿ ದೊರೆತಿದೆ.

**ಪ್ರಶ್ನೆಗಳು**

1. ಕುವೆಂಪು ಅವರ ಪೂರ್ಣ ಹೆಸರೇನು?
2. ಕುವೆಂಪು ಅವರ ಹುಟ್ಟಿದ್ದು ಎಲ್ಲಿ?
3. ಕುವೆಂಪು ಅವರು ಮಕ್ಕಳಿಗಾಗಿ ಬರೆದಿರುವ ಪುಸ್ತಕಗಳು ಯಾವುವು?
4. ಕುವೆಂಪು ಅವರ ಯಾವ ಕೃತಿಗೆ ಜ್ಞಾನ ಪೀಠ ಪ್ರಶಸ್ತಿ ದೊರೆತಿದೆ?

BEO NANJANGUD

**III. ಕೊಟ್ಟಿರುವ ಗಾದೆಮಾತುಗಳನ್ನು ಪೂರ್ಣಮಾಡಿ;-**

1. ಕೈ ಕೆಸರಾದರೆ ______________
2. ಆಕಳು ಕಪ್ಪಾದರೆ ______________
3. ಮಾಡಿದ್ದುಣ್ಣೋ ______________
4. ಗಿಡವಾಗಿ ಬಗ್ಗದ್ದು ಮರವಾಗಿ __________
5. ಮನಸ್ಸಿದ್ದರೆ _______
6. ಅತಿ ಆಸೆ ___________

**IV. ನಿಮಗೆ ತಿಳಿದಿರುವ ಚಿಕ್ಕ ನೀತಿ ಕಥೆಯನ್ನು ನಿಮ್ಮದೇ ಧ್ವನಿಯಲ್ಲಿ ಧ್ವನಿ ಮುದ್ರಿಸಿ (ರೆಕಾರ್ಡ್ ) ಮಾಡಿ ವಾಟ್ಸಾಪ್ ನಲ್ಲಿ ಕಳುಹಿಸಿ;- 3 ನಿಮಿಷದ ಒಳಗಿರಲಿ**

**V. ನಿಮಗೆ ಇಷ್ಟವಾದ ಸಾಕುಪ್ರಾಣಿಯನ್ನು ಕುರಿತು ಆರು ವಾಕ್ಯಗಳನ್ನು ಬರೆಯಿರಿ;-**

**ಸುಳಿವುಗಳು** – ಅದರ ಆಕಾರ - ಬಣ್ಣ - ಆಹಾರ – ಮರಿ – ಪ್ರಯೋಜನಗಳು ಇತ್ಯಾದಿ

| ಕೂಡಿಸಿ ಬರೆಯಿರಿ | | ಬಿಡಿಸಿ ಬರೆಯಿರಿ | |
|---|---|---|---|
| ಮಗು + ಅನ್ನು | ಮಗುವನ್ನು | ಮಾತಿಲ್ಲ | ಮಾತು + ಇಲ್ಲ |
| ಹೂ + ಅಲ್ಲಿ | | ಊರೂರು | |
| ಗುರು + ಇಗೆ | | ಬೇರೊಂದು | |
| ಮರ + ಅನ್ನು | | ಒಂದೊಂದು | |
| ಕೈ + ಅಲ್ಲಿ | ಕೈಯಲ್ಲಿ | ತೆರೆದಿಡು | ತೆರೆದು + ಇಡು |
| ಮನೆ + ಇಂದ | | ತಪ್ಪಿಲ್ಲ | |
| ಶಾಲೆ + ಒಳಗೆ | | ಬೇರೊಬ್ಬ | |
| ಬಲೆ + ಇಂದ | | ಮುಚ್ಚಿಡು | |

**VI. ತತ್ಸಮ – ತದ್ಭವ ಪದಗಳನ್ನು ಓದಿ ಗ್ರಹಿಸಿ ಕೊಂಡು ತಪ್ಪಿಲ್ಲದಂತೆ ನಕಲು ಮಾಡಿ ಬರೆಯಿರಿ;-**

| | | |
|---|---|---|
| ಕೀರ್ತಿ - ಕೀರುತಿ | ಹರ್ಷ - ಹರುಷ | ಸಂತೋಷ - ಸಂತಸ |
| ಮೂರ್ತಿ - ಮೂರುತಿ | ಪ್ರಾಣ - ಹರಣ | ಪಕ್ಷಿ - ಹಕ್ಕಿ |
| ವರ್ಷ - ವರುಷ | ಚಂದ್ರ - ಚಂದಿರ | ವರ್ಣ – ಬಣ್ಣ |

**VII. ಕೊಟ್ಟಿರುವ ಪದಗಳನ್ನು ಜೋರಾಗಿ ಮತ್ತು ಸ್ಪಷ್ಟವಾಗಿ ಓದಿ ನಂತರ ತಪ್ಪಿಲ್ಲದೆ ಪುಸ್ತಕದಲ್ಲಿ ಬರೆಯಿರಿ:**

| | | |
|---|---|---|
| ಚೂರ್ಣ | ಕರ್ನಾಟಕ | ವಿದ್ಯಾರ್ಥಿ |
| ಪೂರ್ಣ | ಸರ್ವೋದಯ | ಹರ್ಷೋದ್ಗಾರ |
| ಕರ್ಣ | ಕಾರ್ಯಕ್ರಮ | ವಾರ್ಷಿಕೋತ್ಸವ |
| ವರ್ಣ | ಸರ್ವತೋಮುಖ | ಅನ್ವರ್ಥನಾಮ |
| ಪರ್ಣ | ಪುನರ್ಬಲನ | ಕಾರ್ಯೋನ್ಮುಖ |

**VIII.ಕೊಟ್ಟಿರುವ ವಾಕ್ಯಗಳನ್ನು ಮಾದರಿಯಂತೆ ಬಹುವಚನಕ್ಕೆ ಬದಲಾಯಿಸಿ;-**

**ಮಾದರಿ –**

ಹುಡುಗನು ಪಾಠವನ್ನು ಓದಿದನು.

ಬಹುವಚನ ರೂಪ – ಹುಡುಗರು ಪಾಠವನ್ನು ಓದಿದರು.

1. ಪಕ್ಷಿಯು ಆಕಾಶದಲ್ಲಿ ಹಾರಿತು.
2. ಮಗು ಹಾಲನ್ನು ಕುಡಿಯಿತು.
3. ಹುಲಿಯು ಜಿಂಕೆಯನ್ನು ಬೇಟೆಯಾಡುತ್ತದೆ.
4. ಅವನು ಶಾಲೆಯ ಆವರಣದಲ್ಲಿ ಗಿಡ ನೆಟ್ಟನು.
5. ರೈತನು ಹೊಲದಲ್ಲಿ ದುಡಿಯುವನು.
6. ಎತ್ತು ಗಾಡಿಯನ್ನು ಎಳೆಯುತ್ತಿದೆ.
7. ಸೈನಿಕನು ದೇಶಕ್ಕಾಗಿ ಪ್ರಾಣ ಬಿಟ್ಟನು.
8. ಹೆಂಗಸು ದೂರದ ಕೆರೆಯಿಂದ ನೀರನ್ನು ತಂದಳು.

B.E. NANJUNDA

# ಕ್ಷೇತ್ರಶಿಕ್ಷಣಾಧಿಕಾರಿಗಳ ಕಾರ್ಯಾಲಯ ಸಾ. ಶಿ.ಇಲಾಖೆ ನಂಜನಗೂಡು

ಸೇತುಬಂಧ **20221–22**

8ನೆಯ ತರಗತಿ ಕನ್ನಡ ಮೌಲ್ಯಮಾಪನ 1

| | |
|---|---|
| ವಿದ್ಯಾರ್ಥಿಯ ಹೆಸರು | |
| ದಿನಾಂಕ | |

1) ಕೊಟ್ಟಿರುವ ಅಕ್ಷರಗಳಿಗೆ ಕಾಗುಣಿತ ಬರೆಯಿರಿ:-

| | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|
| ತ | | | | | | | | | | | | | | | | |
| ನ | | | | | | | | | | | | | | | | |
| ಪ | | | | | | | | | | | | | | | | |
| ಯ | | | | | | | | | | | | | | | | |

2) ಕೊಟ್ಟಿರುವ ಪದಗಳಿಗೆ ಸಮಾನಾರ್ಥಕ ಪದ ಬರೆಯಿರಿ:-

1) ಸಮುದ್ರ -

2) ಹಾವು -

3) ಕೊಟ್ಟಿರುವ ಪದಗಳಿಗೆ ವಿರುದ್ಧಾರ್ಥಕ ಪದ ಬರೆಯಿರಿ:-

1) ಗಣಿತ x

2) ಪ್ರಕಟಿತ x

4) ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆಯಿರಿ:-

1) ತಪ್ಪಿಲ್ಲ =

2) ಮನೆಯಲ್ಲಿ =

5) ಕೊಟ್ಟಿರುವ ಪದಗಳನ್ನು ಬಳಸಿ ನಿಮ್ಮದೇ ವಾಕ್ಯ ರಚಿಸಿ**;-**

1) ತಳಿರು ತೋರಣ

2) ಜನಪ್ರಿಯ

6) ಕೊಟ್ಟಿರುವ ಪದಗಳಿಗೆ ತತ್ಸಮ – ತದ್ಭವ ಬರೆಯಿರಿ:-

1) ಮೂರ್ತಿ -

2) ಪಕ್ಷಿ -

7) ಕೊಟ್ಟಿರುವ ವಾಕ್ಯಗಳನ್ನು ಬಹುವಚನಕ್ಕೆ ಬದಲಾಯಿಸಿ;-

1) ರೈತನು ಹೊಲದಲ್ಲಿ ದುಡಿಯುವನು.

2)ಎತ್ತು ಗಾಡಿಯನ್ನು ಎಳೆಯುತ್ತಿದೆ.

8) ಕೊಟ್ಟಿರುವ ಗಾದೆ ಮಾತುಗಳನ್ನು ಪೂರ್ಣಮಾಡಿ**;-**

1. ಕೈ ಕೆಸರಾದರೆ ________________

2. ಗಿಡವಾಗಿ ಬಗ್ಗದ್ದು ಮರವಾಗಿ ___________

B.E.O NANJANGUD